ದಿನಾಂಕ:07.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟಿಸವಾಲು: ಶ್ರೀ.ಎಸ್.ವಿ.ಜಿ. ವಕೀಲರಿಂದ 1 ನೇ ಪ್ರತಿವಾದಿ ಪರವಾಗಿ.**

ದಾವಾ ಆಸ್ತಿ ಮೇಲೆ ನನ್ನ ತಂದೆ ಬ್ಯಾಂಕಿನಿಂದ ಸಾಲ ಪಡೆದಿದ್ದರು. ಸದರಿ ಸಾಲವನ್ನು ಸರಿಯಾಗಿ ತುಂಬಿಲ್ಲ ಎಂದರೆ ಸರಿ. ಆ ಕಾರಣದಿಂದ ಆಸ್ತಿಯನ್ನು ಬ್ಯಾಂಕಿನವರು ಹರಾಜು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ 1 ನೇ ಪ್ರತಿವಾದಿಯ ತಂದೆ ಬಸಪ್ಪ ಸಾಲ ತುಂಬಿರುತ್ತಾರೆಂದರೆ ಸರಿ. ಬಸಪ್ಪ ಮೃತಪಟ್ಟು 5-6 ವರ್ಷಗಳಾದವು. ಬಸಪ್ಪ ಮೃತಪಟ್ಟ ನಂತರ ದಾವಾ ಆಸ್ತಿಯಲ್ಲಿ ಅಪಸಾತ ಆಗಿ 1 ನೇ ಪ್ರತಿವಾದಿಯ ಹೆಸರು ದಾಖಲಾಗಿತ್ತದೆ ಎಂದರೆ ದಾವಾ ಆಸ್ತಿಯಲ್ಲಿ ಪಾಲು ವಾಟ್ನಿ ಆಗಿಲ್ಲವೆಂದು ನುಡಿಯುವರು. ದಾವಾ ಆಸ್ತಿಗೆ ನಾನು ಸಂಬಂಧಿಸಿದವನು ಅಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಪ್ರಧಾನ ಮಂತ್ರಿ ಯೋಜನೆ ಅಡಿಯಲ್ಲಿ ದಾವಾ ಆಸ್ತಿಯ ಮೇಲೆ ಸಾಲ ಪಡೆದಿರುತ್ತಾನೆಂದರೆ ನನಗೆ ಗೊತ್ತಿಲ್ಲ. ಆ ಸಾಲ ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹಣದಲ್ಲಿ ದಾವಾ ಆಸ್ತಿಯಲ್ಲಿ ಮನೆ ಕಟ್ಟಿಸಿರುತ್ತಾನೆಂದರೆ ಸರಿ. ಆದರೆ ನಾನು ಅದಕ್ಕೆ ತಕರಾರು ಮಾಡಿದ್ದರೂ ಮನೆ ಕಟ್ಟಿರುತ್ತಾನೆ. ಶ್ರೀ. ತುಬಚಿ ವಕೀಲರಿಂದ ಮುನಿಸಿಪಾಲಿಟಿಗೆ ತಕರಾರು ಅರ್ಜಿ ಸಲ್ಲಿಸಿದ್ದೇವು. ಸದರಿ ತಕರಾರನ್ನು ಮುನಿಸಿಪಾಲಿಟಿಯವರು ಸ್ವೀಕರಿಸಿರುವುದಿಲ್ಲ. ಸಿಟಿಎಸ್ ನಂ. 441 ನ್ನು ದಾವಾ ಆಸ್ತಿಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸದರಿ ಆಸ್ತಿ ಪವಾಡೆಪ್ಪನ ಹೆಸರಿನಲ್ಲಿದೆ. ಈ ಬಗ್ಗೆ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ವಾದ ಪತ್ರದ 9 ನೇ ಖಂಡಿಕೆಯಲ್ಲಿ ದಿ: 19.03.2003 ರಂದು ಮೃತ್ಯು ಪತ್ರದ ಬಗ್ಗೆ ಬರೆಸಿದ್ದು, ಅದು ಯಾರ ಮಧ್ಯ ಆಗಿರುತ್ತದೆ ಅಂತ ಗೊತ್ತಿಲ್ಲ. ಆ ದಾಖಲೆ ಬಗ್ಗೆ ನನಗೆ ಮಾಹಿತಿ ಇಲ್ಲ. ಮೃತ್ಯು ಪತ್ರದ

ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸಿಲ್ಲ ಎಂದರೆ ಗೊತ್ತಿಲ್ಲ. 2010 ರಲ್ಲಿ ದಾವಾ ಆಸ್ತಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಆಗಿದ್ದು, ಆ ಬಗ್ಗೆ ದಾಖಲೆಗಳನ್ನು ನಾನು ಎಲ್ಲಿಯೂ ಪ್ರಶ್ನಿಸಿಲ್ಲ. ಸಿವ್ಹಿಲ್ ನ್ಯಾಯಾಲಯ, ಬನಹಟ್ಟಿಯಲ್ಲಿ ಸಲ್ಲಿಸಿದ ಪಾಲುವಿಭಾಗದ ದಾವೆಯು ದಿ: 25.09.2009 ರಂದು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನನ್ನ ಪರವಾಗಿ ಶ್ರೀ. ಕೆರೂರ ವಕೀಲರು ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಪವಾಡೆಪ್ಪ ಮತ್ತು ನಾಗಪ್ಪ ಇಬ್ಬರು ಬೇರೆ ಬೇರೆ ಇದ್ದರೂ ಸಹ ವಾಟ್ನಿಯಾಗಿರಲಿಲ್ಲ. ಸಿಟಿಎಸ್ ನಂ. 441 ಪವಾಡೆಪ್ಪನ ಪಾಲಿಗೆ ಬಂದಿದ್ದು, 1972 ನೇ ಇಸವಿಯಲ್ಲಿ ಪಶುಪತೆಪ್ಪ ಇವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಆಸ್ತಿಯನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು,
ಬನಹಟ್ಟಿ.